

ಚಿತ್ರಗಳು: ಕೃಷ್ಣಕುಮಾರ್ ಪಿ.ಎಸ್.

ನೋಡುವ ಧೈರ್ಯವೂ ನಮಗೆ ಬರಲಿಲ್ಲ. ತಲೆ ತಗ್ಗಿಸಿಯೇ ಅವರೊಂದಿಗೆ ಸ್ವಲ್ಪಹೊತ್ತು ಮಾತಾಡಿ ಆಸ್ಪತ್ರೆಯಿಂದ ಹೊರಗೆ ಬಂದಾಗ ಹೃದಯ ಭಾರವಾಗಿತ್ತು. ಬೆಂಗಳೂರಿನ ಕತ್ತಲೆ ಏಕೋ ಒಮ್ಮೆಗೇ ಗಾಢವಾಗಿರುವಂತೆ ಅನ್ನಿಸಿತು. ಆ ಕತ್ತಲೆಯ ಗರ್ಭದ ವಿದ್ಯುದ್ದೀಪಗಳ ಮಿನುಕು ಕತ್ತಲೆಯ ವಿರುದ್ಧದ ವ್ಯರ್ಥ ಹೋರಾಟದಂತೆ ಕಾಣುತ್ತಾ ಇತ್ತು. ನಾಡಿಗರೊಂದಿಗೆ ಕಳೆದ ಗಳಿಗೆಗಳ ನೆನಪುಗಳು ಒಂದಾದ ಮೇಲೆ ಒಂದರಂತೆ ಆಕ್ರಮಿಸುತ್ತಾ ಇದ್ದವು. ಅವನ್ನು ಪರಿಭಾವಿಸುತ್ತಾ ಮಾತಿಲ್ಲದೆ ನಾವು ಮನೆಗೆ ಹಿಂದಿರುಗಿದೆವು.

1973ರ ಆಜುಬಾಜಲ್ಲಿ ನಾಡಿಗರನ್ನು ನಾನು ಮೊಟ್ಟಮೊದಲು ನೋಡಿದ್ದು. ಆಗಷ್ಟೇ ಅವರು ಅಮೆರಿಕದಿಂದ ಹಿಂದಿರುಗಿದ್ದರು. ದೊಡ್ಡ ಪಪ್ಪಳಿ ಪ್ಯಾಂಟು ಹಾಕಿಕೊಂಡು ಬೇಂದ್ರೆ ಕಾವ್ಯವನ್ನು ತೀವ್ರವಾಗಿ ಗೇಲಿ ಮಾಡುತ್ತಾ ವೇದಿಕೆಯ ಹಿಂದೆ ಮುಂದೆ ತಾವಾಗಿ ಚಲಿಸುತ್ತಾ ಅವರು ನಾಟಕೀಯವಾಗಿ ಮಾತಾಡಿದ್ದು ಬೆಂಗಳೂರಿನ ಎನ್.ಆರ್.